ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

೮೯೯. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ವಾಹನ ಬಲ ೧೯೮೭–೮೮, ೧೯೮೮–೮೯,

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಹೊಂದಿರುವ ಮಾರ್ಗಸೂಚಿಗಳ ಸಂಖ್ಯೆ.

ಇ) ಸಮಯಪಾಲನೆ ಮಾಡಿ ಸಂಚರಿಸುವ ಮಾರ್ಗಸೂಚಿಗಳು (ಶೇಕಡವಾರು ವಿವರ ನೀಡುವುದು)

ಈ) ೧೯೮೬–೮೭, ೧೯೮೭–೮೮, ೧೯೮೮–೮೯ರಲ್ಲಿ ಎಷ್ಟು ನಷ್ಟ ಅನುಭವಿಸಿದೆ.

ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೧೯೮೭–೮೮ ಮತ್ತು ೧೯೮೮–೮೯ನೇ ಸಾಲಿನಲ್ಲಿ ಕ್ರಮವೂ ೮೫೫ ಮತ್ತು ೮೬೮ ವಾಹನಗಳನ್ನು ಹೊಂದಿದೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರಸ್ತುತ ೭೪೨೫ ಅನುಸೂಚಿಗಳ ಕಾರ್ಯಾಚರಣೆ ನಡೆಸುತ್ತಿದೆ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಸಮಯ ಪಾಲನೆಯನ್ನು ಸರತಿವಾರು ಮಾಡುತ್ತಿದೆ. ಜನವರಿ ೧೯೮೯ರಲ್ಲಿ ಸಾಧಿಸಿದ ಸಮಯಪಾಲನೆ ಈ ಕೆಳಕಂಡಂತಿದೆ.—

ನಿರ್ಗಮನ ೮೯.೪

ಆಗಮನ ೮೬.೮

ಈ) ಸಂಸ್ಥೆಯು ೧೯೮೬–೮೭, ೧೯೮೭–೮೮ ಮತ್ತು ೧೯೮೮–೮೯ (ಏಪ್ರಿಲ್ ೧೯೮೮ರಿಂದ ಫೆಬ್ರವರಿ ೧೯೮೯ರ ವರೆಗೆ) ಕ್ರಮವಾಗಿ ೭೯೭.೭೦ ಲಕ್ಷ ರೂ. ೪೪೯.೫೯ ಲಕ್ಷ ರೂ. ಮತ್ತು ೮೯೫.೬೧ ಲಕ್ಷ ರೂ.ಗಳ ನಷ್ಟವನ್ನು ಕ್ರಮವಾಗಿ ಅನುಭವಿಸಿದೆ.

ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಲಾಭ ಹಾನಿಯ ಕುರಿತು

೮೩೭. ಶ್ರೀ ಜಿ.ಎಂ. ಕಾನಡೆ, (ಸಿರಸಿ).— ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಕೆ.ಎಸ್.ಆರ್.ಟಿ.ಸಿ ಇಲಾಖೆಯಲ್ಲಿರುವ ಬಸ್‌ನ ಸಂಖ್ಯೆ ಎಷ್ಟು?

ಆ) ಎಲ್ಲಾ ಬಸ್ಸುಗಳು ಚಾಲನೆಯಲ್ಲಿ ಇದೆಯೇ, ಚಾಲನೆಯಲ್ಲಿ ಇಲ್ಲದಿರುವ ಬಸ್ಸುಗಳ ಸಂಖ್ಯೆ ಎಷ್ಟು?

ಇ) ಈ ಬಸ್ಸುಗಳಿಂದ ಸರ್ಕಾರಕ್ಕೆ ವರ್ಷಕ್ಕೆ ಬರುವ ಆದಾಯ ಎಷ್ಟು?

ಈ) ೧೯೮೬ರಿಂದ ಇದುವರೆಗೆ ಕೆ.ಎಸ್.ಆರ್.ಟಿ.ಸಿ. ಎಷ್ಟು ಕೋಟಿ ರೂಪಾಯಿ ನಷ್ಟವನ್ನು ಅನುಭವಿಸಿದೆ?

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೮೬೭೧ ವಾಹನಗಳನ್ನು ಹೊಂದಿದೆ.

ಆ) ಇಲ್ಲ.

೫೮೭. (ಸ್ಕ್ರಾಪ್ ಆಗಬೇಕಾಗಿರುವ ೮೪ ವಾಹನಗಳು ಸೇರಿ)

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಈ ವಾಹನಗಳಿಂದ ೧೯೮೭–೮೮ನೇ ಸಾಲಿನಲ್ಲಿ ೫೪೫.೬ ಕೋಟಿ ರೂ.ಗಳ ಆದಾಯ ಗಳಿಸಿದೆ. ಈ ಪೈಕಿ ಸರ್ಕಾರಕ್ಕೆ ವಾಹನ ತೆರಿಗೆ ೫೧.೮೪ ಕೋಟಿ ರೂ. ಸಂದಿದೆ.

ಈ) ಸಂಸ್ಥೆಯು ೧೯೮೬ನೇ ಏಪ್ರಿಲ್‌ನಿಂದ ೧೯೮೯ನೇ ಫೆಬ್ರವರಿವರೆಗೆ ಒಟ್ಟು ೧೩೮.೯೩ ಕೋಟಿ ರೂ.ಗಳ ನಷ್ಟವನ್ನು ಅನುಭವಿಸಿದೆ.